ಜಿ+1 ವಸತಿ ಯೋಜನೆ

108(914); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ಶಿಗ್ಗಾಂವ್, ಸವಣೂರು ಮತ್ತು ಬಂಕಾಪೂರ ನಗರ ಪ್ರದೇಶದಲ್ಲಿ ಜಿ+1 ವಸತಿ ಯೋಜನೆ ಹಂತದಲ್ಲಿದೆ.

ಆ) ಸದರಿ ಯೋಜನೆಗೆ ಅನುದಾನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಯೋಜನೆಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) 2012–13ನೇ ಸಾಲಿನಲ್ಲಿ ವಾಜಪೇಯಿ ನಗರ ವಸತಿ ಯೋಜನೆಯಡಿ ಸರ್ಕಾರದ ಆದೇಶ ಸಂ: ವಇ266 ಹೆಚ್ಎಹೆಚ್ 2012 ದಿನಾಂಕ 08.11.2012ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾಂವ್, ಸವಣೂರು ಮತ್ತು ಬಂಕಾಪೂರ ನಗರ ಪ್ರದೇಶದಲ್ಲಿ ಜಿ+1 ವಸತಿ ಯೋಜನೆಯಡಿ 2204 ಮನೆಗಳನ್ನು ನಿರ್ಮಿಸಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಂಜೂರು ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ಘಟಕ ವೆಚ್ಚ ರೂ. 2.15 ಲಕ್ಷಗಳಾಗಿರುತ್ತದೆ. ಅದರಲ್ಲಿ ಸರ್ಕಾರದಿಂದ ಸಹಾಯಧನವಾಗಿ ರೂ. 1,00,000, ಫಲಾನುಭವಿಯ ವಂತಿಕೆ ರೂ. 40,000 ಹಾಗೂ ಬ್ಯಾಂಕ್ ಸಾಲ ರೂ. 75,000 ಗಳಾಗಿರುತ್ತದೆ.

ಸದರಿ ಯೋಜನೆಯಡಿ ಶಿಗ್ಗಾಂವ್, ಸವಣೂರು ಮತ್ತು ಬಂಕಾಪೂರ ನಗರ ಪ್ರದೇಶದಲ್ಲಿ ಒಟ್ಟು 2204 ಮಂಜೂರಾದ ಮನೆಗಳಲ್ಲಿ 991 ಫಲಾನುಭವಿಗಳ ಆಯ್ಕೆಯಾಗಿರುತ್ತದೆ. ಅದರಲ್ಲಿ 144 ಮನೆಗಳು ಪಾಯ, 32 ಲಿಂಟಲ್, 92 ಮೇಲ್ಚಾವಣಿ ಹಂತ, 100 ಛಾವಣಿ ಮುಕ್ತಾಯ ಹಂತದಲ್ಲಿದ್ದು, 8 ಮನೆಗಳು ಮುಕ್ತಾಯವಾಗಿವೆ. ಉಳಿದ ಮನೆಗಳು ವಿವಿಧ ಕಾರಣಗಳಿಂದ ಪ್ರಾರಂಭವಾಗಿರುವುದಿಲ್ಲ.

ಆ) ಇಲ್ಲ.

ಇ) ಈ ಕೆಳಕಂಡ ಕಾರಣಗಳಿಂದ ಕಾಮಗಾರಿಯು ನಿಗದಿತ ಸಮಯದಲ್ಲಿ ಪೂರ್ಣಗೊಂಡಿರುವುದಿಲ್ಲ.

(i) ನಿಗದಿತ ಸಮಯದಲ್ಲಿ ಫಲಾನುಭವಿಗಳ ಆಯ್ಕೆ ಯಾಗದಿರುವುದು.

(ii) ಫಲಾನುಭವಿಗಳ ವಂತಿಕೆಯನ್ನು ನಿಗದಿತ ಸಮಯದಲ್ಲಿ ಕ್ರೋಡೀಕರಿಸದೇ ಇರುವುದು.

(iii) ಆಯ್ಕೆಯಾದ ಫಲಾನುಭವಿಗಳಿಗೆ ಬ್ಯಾಂಕಿನಿಂದ ಸಾಲ ದೊರೆಯದೇ ಇದ್ದುದರಿಂದ ಯೋಜನೆಗೆ ಬೇಕಾಗುವ ಅನುದಾನವನ್ನು ಕ್ರೋಢೀಕರಿಸದಿರುವುದು.

(iv) ನಿಗದಿಪಡಿಸಿದ ಒಟ್ಟು 2204 ಗುರಿಗೆ ಎದುರಾಗಿ 991 ಫಲಾನುಭವಿಗಳನ್ನು ಮಾತ್ರ ಆಶ್ರಯ ಸಮಿತಿಯಲ್ಲಿ ಆಯ್ಕೆ ಮಾಡಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವ್): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 108(914)ನ್ನು ಮಾನ್ಯ ವಸತಿ ಸಚಿವರಿಗೆ ಕೇಳಬಯಸುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) (ಮಾನ್ಯ ವಸತಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ವಸತಿ ಸಚಿವರ ಪರವಾಗಿ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ಪ್ರಶ್ನೆಯನ್ನು ಕೇಳುತ್ತೇನೆ. ಇದು G+1 ಇರುವುದರಿಂದ ಫಲಾನುಭವಿಗಳ ಆಯ್ಕೆ ಸ್ವಲ್ಪ ನಿಧಾನವಾಗಿದೆ. ಈಗ ಪ್ರಕ್ರಿಯೆ ಚುರುಕುಗೊಂಡಿದೆ. In the

meantime per unit cost ಹೆಚ್ಚಾಗಿದೆ. ಅದನ್ನು ಇವತ್ತಿನ ಬೇರೆ ಯೋಜನೆಗಳಿಗೆ ಇರುವ cost ಅನ್ನು ಸರ್ಕಾರ ಅಳವಡಿಸುವುದಕ್ಕೆ ಪರಿಶೀಲನೆ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಮತ್ತು ಮಿಕ್ಕಿರುವಂಥ ಹಣವನ್ನು ಬಂಕಾಪುರದಲ್ಲಿ ಪ್ರಾರಂಭ ಮಾಡುವುದಕ್ಕೆ ಬಿಡುಗಡೆ ಮಾಡುತ್ತೀರಾ? ಸರ್ಕಾರದ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಷೇರು ಏನಿದೆ, ಬಿಡುಗಡೆ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ವಿನಯಕುಮಾರ್ ಸೊರಕೆ: ಮಾನ್ಯ ಅಧ್ಯಕ್ಷರೆ, G+1 ವಸತಿ ಯೋಜನೆ 2,204 ಮನೆಗಳನ್ನು ಮಂಜೂರಾತಿ ಮಾಡಿಕೊಂಡು ಅದರಲ್ಲಿ 2.15 ಲಕ್ಷ ರೂಪಾಯಿ ಅನುದಾನದಲ್ಲಿ ಮನೆಯನ್ನು ನಿರ್ಮಾಣ ಮಾಡುವುದು. ಅದರಲ್ಲಿ ಸಹಾಯಧನ 1 ಲಕ್ಷ ರೂಪಾಯಿ, ಫಲಾನುಭವಿಗಳ ವಂತಿಕೆ 40,000, ನಂತರ ಬ್ಯಾಂಕ್ ಸಾಲ 75,000 ಅನ್ನುವಂತಹ ರೀತಿಯಲ್ಲಿ. ಈಗಾಗಲೇ ಮಾನ್ಯ ಶಾಸಕರು 991 ಮನೆಗಳನ್ನು ಆಯ್ಕೆ ಮಾಡಿದ್ದೀರಿ. ಈಗ ಬ್ಯಾಂಕ್ ಸಾಲ ಮತ್ತು ವಂತಿಕೆ ಹಾಕುವಂಥ ಹಣವನ್ನು ತಾವು ಆಯ್ಕೆ ಮಾಡುವಂಥ ಸಂದರ್ಭದಲ್ಲಿಯೇ ಜೋಡಣೆ ಮಾಡಿಕೊಳ್ಳಬೇಕಾದ ಅವಶ್ಯಕತೆಯಿರುತ್ತದೆ.

ಶ್ರೀ ಬಸವರಾಜ ಬೊಮ್ಮಯಿ: ಮಾನ್ಯ ಅಧ್ಯಕ್ಷರೆ, ಬ್ಯಾಂಕ್ ಸಾಲ ನಾವು ಮಾಡುವುದಕ್ಕೆ ಆಗುವುದಿಲ್ಲ. ಬ್ಯಾಂಕ್ ಸಾಲಕ್ಕಾಗಿ ನೀವು ನಮ್ಮ district lead bank ಜೊತೆಗೆ ಮಾತನಾಡಿ ಸರ್ಕಾರದವರಾಗಿ ನೀವು ಮಾಡಿಸಬೇಕಾಗುತ್ತದೆ. ಈ ಯೋಜನೆ success ಆಗಬೇಕಾದರೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಜವಾಬ್ದಾರಿ ಬಹಳ ದೊಡ್ಡದಿದೆ. ಅದರಿಂದ ನೀವು ನುಣುಚಿಕೊಳ್ಳುತ್ತಿದ್ದೀರಿ. ಆದ್ದರಿಂದ ಬಡವರಿಗೆ ಬ್ಯಾಂಕ್ ಸಾಲ ಕೊಡಿಸುವಂಥ ವ್ಯವಸ್ಥೆಯನ್ನು ನೀವೇ ಮಾಡಬೇಕಾಗುತ್ತದೆ.

ಶ್ರೀ ವಿನಯಕುಮಾರ್ ಸೊರಕೆ: 40,000 ರೂಪಾಯಿ ಆ ಫಲಾನುಭವಿ ವಂತಿಗೆ ಕೊಡುವುದು.

ಶ್ರೀ ಬಸವರಾಜ ಬೊಮ್ಮಯಿ: 991 ಜನ ಫಲಾನುಭವಿಗಳಿಂದ ನಾವು ವಂತಿಗೆಯನ್ನು ತುಂಬಿಸಿದ್ದೇವೆ.

ಶ್ರೀ ವಿನಯಕುಮಾರ್ ಸೊರಕೆ: 2204 ಮನೆಗಳ ಪೈಕಿ 991 ಮನೆಯನ್ನು ಮಾತ್ರ ಆಯ್ಕೆ ಮಾಡಿರುವುದು.

ಶ್ರೀ ಬಸವರಾಜ ಬೊಮ್ಮಯಿ: ಏಕೆಂದರೆ, G+1 ಎಂದು ಪ್ರಾಯೋಗಿಕವಾಗಿ ನಾವು ಪ್ರಾರಂಭ ಮಾಡಿದಾಗ ಹಳ್ಳಿಗಳಲ್ಲಿ ಇದಕ್ಕೆ ಮೊದಲು ವಿರೋಧವಿತ್ತು. ಈಗ convince ಮಾಡಿ ಮಾಡಿದ್ದೇವೆ. ಸುಮಾರು ಒಂದು ಸಾವಿರ ಜನರಿಗೆ ಕೊಟ್ಟಿದ್ದು, ಇನ್ನೊಂದು ಸಾವಿರ ಜನರಿಗೆ ಕೊಡಬೇಕಾಗಿದೆ. ಅದನ್ನು ಕೊಡುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. in the meantime ಎರಡೇ ಎರಡು ಪ್ರಶ್ನೆ, ಬ್ಯಾಂಕಿನ ಸಾಲವನ್ನು ಮಾಡುವಂತಹ ವ್ಯವಸ್ಥೆ unit cost ಹೆಚ್ಚು ಮಾಡುವುದಕ್ಕೆ ಬಂಕಾಪುರದಲ್ಲಿ ಪ್ರಾರಂಭವಾಗಿಲ್ಲ. ಹಣ ಬಿಡುಗಡೆ ಮಾಡುವುದು. ಇದು ತಮ್ಮ ಕೈಯ್ಯಲ್ಲಿದೆ. ಮಾಡುವ ಸಾಧ್ಯತೆಯಿದೆ. ಪರಿಶೀಲನೆ ಮಾಡಿ ದಯವಿಟ್ಟು ಮಾಡಿ.

ಶ್ರೀ ಅಬ್ಬಯ್ಯ ಪ್ರಸಾದ್: Bankers ಎಲ್ಲಿಯೂ ಕೊಡುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಯಿ: Bankers ಕೊಡದೇ ಇರುವುದರಿಂದ ಸರ್ಕಾರ initiative ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಆಯಿತು. ಹೇಳಿ Bankers ದು ಹೇಳಿ.

ಶ್ರೀ ಅಬ್ಬಯ್ಯ ಪ್ರಸಾದ್: ಸಾಕಷ್ಟು ಬಾರಿ ಸಭೆಗಳನ್ನು ಮಾಡಿದ್ದೇವೆ. ಎಲ್ಲಿಯೂ bankers ಕೊಡುವುದಿಲ್ಲ. ಯಾವುದಾದರೊಂದು ಕಾರಣ ಹೇಳಿ ಕೊಡಲಾಗುವುದಿಲ್ಲ, ಆಮೇಲೆ ಅವರೆಲ್ಲ ಏನು ಹೇಳುತ್ತಾರೆಂದರೆ 50 ಸಾವಿರದ ಮೇಲೆ ಕೊಡಲಾಗುವುದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ ಅವರು income base ಮೇಲೆ ನಾವು ಕೊಡುತ್ತೇವೆಂದು ಹೇಳುತ್ತಾರೆ. Income base ಮೇಲೆ ಕೊಟ್ಟರೆ income certificate ತೆಗೆದುಕೊಂಡು ಮಾಡಿದರೆ

technical problem ಇದೆ. ಅಲ್ಲಿ ರೇಷನ್ ಒಂದು ರೂಪಾಯಿ ಕೆ.ಜಿ. ಅಕ್ಕಿ ಹೋಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಬಡವರಿಗೆ ಮನೆ ಕೊಡುತ್ತೀರಿ. ಅಲ್ಲಿ ಅವನ income ಮೇಲೆ ಸಾಲ ಕೊಡುತ್ತೇವೆಂದರೆ ಅವನಿಗೆ ಇದಕ್ಕೆ ಅರ್ಹತೆಯೇ ಬರುವುದಿಲ್ಲ.

ಶ್ರೀ ವಿನಯ ಕುಮಾರ್ ಸೊರಕೆ: Bankers ಜೊತೆ ಸಭೆ ಮಾಡಿದ್ದೇವೆ. 16.53 ಕೋಟಿ ರೂ.ಗಳ ಅನುದಾನವನ್ನು ಒದಗಿಸುವ ರೀತಿಯಲ್ಲಿ bankers meeting ಮಾಡಿದ್ದೇವೆ. ಮುಂದೆ 40 ಸಾವಿರ ರೂ. ಫಲಾನುಭವಿಗಳ ಒಂದು ವಂತಿಕೆ ಕೂಡಾ ಸೇರಿದ ಸಂದರ್ಭದಲ್ಲಿನದು.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನು ಆಗಲೇ submit ಮಾಡಿದ್ದಾರೆ. ಫಲಾನುಭವಿಗಳೆಲ್ಲ ಕೊಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ಸಚಿವರೆ, simple ಪ್ರಶ್ನೆ. ಯಾವುದಾದರೂ ಒಂದು ಬ್ಯಾಂಕಿನ ಜೊತೆಗೆ tie up ಮಾಡಿಕೊಂಡು ಮಂಜೂರು ಮಾಡಿದ ಕೂಡಲೇ bank ನವರು automatically ಮಾಡುವ ವ್ಯವಸ್ಥೆ ಮಾಡಿ.

(ಗೊಂದಲ)

ಶ್ರೀ ವಿನಯ ಕುಮಾರ್ ಸೊರಕೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಹಾಗೂ ತಮ್ಮ ಜೊತೆಯಲ್ಲಿ ಮಾತುಕತೆ ಮಾಡಿ ಮಾಡುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ: ಆಯಿತು ಬಿಡಿ. ಮಂತ್ರಿಗಳ ಗಮನಕ್ಕೆ ತನ್ನಿ. ಪಾಪ, ನೀವೇನು ಮಾಡುತ್ತೀರಿ?

ಅಧ್ಯಕ್ಷರು: ಆಯಿತು. ಈಗ ಬಿ.ಎನ್. ವಿಜಯಕುಮಾರ್ ರವರ ಪ್ರಶ್ನೆ. ನಿಮ್ಮ ಪ್ರಶ್ನೆಗೆ ಉತ್ತರ ನೀಡಲು ಸಮಯ ಕೇಳಿದ್ದಾರೆ.

ಶ್ರೀ ಬಿ.ಎನ್. ವಿಜಯಕುಮಾರ್: ಮಾನ್ಯ ಅಧ್ಯಕ್ಷರೆ, ಒಂದು ಮಾತು. ಇದರ ಕುರಿತು ನಾನು ಎರಡು–ಮೂರು ವರ್ಷಗಳಿಂದ ಕೇಳುತ್ತಿದ್ದೇನೆ. ಇಡೀ ಬೆಂಗಳೂರು ಸಿಟಿ ಕೇಳಿದೆ, zone ಕೇಳಿದೆ. ನಮ್ಮ constituency ಕುರಿತು ಕೇಳುತ್ತಿದ್ದೇನೆ. ಇದನ್ನು ಕೊಡುವುದಿಲ್ಲವೆಂದರೆ ನಾನು ಯಾವ ರೂಪದಲ್ಲಿ ತಂದರೆ ಉತ್ತರ ಕೊಡುತ್ತಾರೆ?

ಅಧ್ಯಕ್ಷರು: ಮಂತ್ರಿಗಳೇ ಬೇಗ ಉತ್ತರ ಕೊಡುತ್ತೇನೆ ಎಂದು ಹೇಳಿ. ಬೆಂಗಳೂರು ನಗರಕ್ಕೆ ಕೊಡಿ.

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕಾಲಾವಕಾಶ ಕೇಳಿದ್ದೇವೆ. we will supply the reply. ನಿಮಗೆ ಈ ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಓ.ಕೆ. ಆಮೇಲೆ ಪ್ರಮೋದ್ ಮಧ್ವರಾಜ್ ರವರ ಪ್ರಶ್ನೆ. ಸದನದಲ್ಲಿ ಇಲ್ಲ. ಎಲ್ಲಿ ಹೋಗುತ್ತಾರೆಂದು ನನಗೆ ಅರ್ಥವಾಗುವುದಿಲ್ಲ. ಚೆನ್ನಬಸಪ್ಪ ಸತ್ಯಪ್ಪ ಶಿವಳ್ಳಿರವರ ಪ್ರಶ್ನೆ, ಎಲ್ರಿ ಶಿವಳ್ಳಿ? ಮೊದಲ ಬಾರಿಗೆ ಶಾಸನಸಭೆಗೆ ಬಂದಿದ್ದಾರೆ.

ಶ್ರೀ ಸಿ.ಟಿ. ರವಿ: ಉತ್ತರ ಕರ್ನಾಟಕದ ಅಧ್ಯಯನ ಮಾಡುವುದಕ್ಕೆ ಹೋಗಿದ್ದಾರೆ.

ಅಧ್ಯಕ್ಷರು: ಹೆಚ್.ಡಿ. ರೇವಣ್ಣ ಇಲ್ಲ. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ ರವರ ಪ್ರಶ್ನೆ.